**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:DCE/BUD/GCC/11/2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.
ಬೆಂಗಳೂರು. ದಿನಾಂಕ:22.04.2022

**ಸುತ್ತೋಲೆ**

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯಕ್ಕೆ ಹಾಜರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ವಿವರಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಕಾರ್ಯಾದೇಶ ಸಂಖ್ಯೆ:DCE/APT1/OS/2021-INFO(E-453975),ದಿನಾಂಕ:20.12.2021.

*****

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಈ ಕಛೇರಿಯ ಕಾರ್ಯಾದೇಶದಲ್ಲಿ ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗಳು ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಡಾಟಾ ಎಂಟ್ರಿ ಆಪರೇಟರ್ಸ್ ಮತ್ತು ಗ್ರೂಪ್-ಡಿ ಸಿಬ್ಬಂದಿಗಳನ್ನು ಒದಗಿಸಲು ಜೆಮಿನಿ ಸೆಕ್ಯೂರಿಟಿ ಮತ್ತು ಅಲೈಡ್ ಸರ್ವಿಸಸ್, ದಾವಣಗೆರೆ ಇವರಿಗೆ ಆದೇಶ ನೀಡಲಾಗಿರುತ್ತದೆ. ಇಲಾಖಾ ವ್ಯಾಪ್ತಿಯ 92 ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳು/ಪ್ರಾದೇಶಿಕ ಕಛೇರಿಗಳಿಗೆ ಹಂಚಿಕೆ ಮಾಡಲಾದ 92 ಡಾಟಾ ಎಂಟ್ರಿ ಆಪರೇಟರ್ಸ್‌ಗಳು ಮತ್ತು 271 ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳು/ಪ್ರಾದೇಶಿಕ ಕಛೇರಿಗಳಿಗೆ ಹಂಚಿಕೆ ಮಾಡಲಾದ 327 ಗ್ರೂಪ್ ಡಿ ನೌಕರರುಗಳು ಕರ್ತವ್ಯಕ್ಕೆ ಹಾಜರಾಗಿ ಕೆಲಸನಿರ್ವಹಿಸಿದ್ದಲ್ಲಿ ಫೆಬ್ರವರಿ-2022 ರವರೆಗೆ ವೇತನ ಪಾವತಿಸಲು ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

ಹೊರಗುತ್ತಿಗೆ ನೌಕರರ ವೇತನ ಪಾವತಿಗಾಗಿ ದಿನಾಂಕ 18.03.2022ರಂದು ಬಿಡುಗಡೆ ಮಾಡಲಾದ ಅನುದಾನಕ್ಕೆ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಲು ಹಾಗೂ ಕರ್ತವ್ಯಕ್ಕೆ ಹಾಜರಾಗಿ ಕೆಲಸ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರುಗಳ ಹಾಜರಾತಿ ಪ್ರಮಾಣಪತ್ರವನ್ನು ವಿಳಂಬಕ್ಕೆ ಆಸ್ಪದವಿಲ್ಲದಂತೆ ಪ್ರತಿ ಮಾಹೆಯ ಮೊದಲ ವಾರದೊಳಗಾಗಿ ಹೊರಗುತ್ತಿಗೆ ನೌಕರರನ್ನು ಕಳುಹಿಸಿಕೊಟ್ಟಿರುವ ಏಜೆನ್ಸಿಯವರಿಗೆ ಮತ್ತು ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ. ವಿವರಗಳನ್ನು ಈ ಕೆಳಕಂಡ ನಮೂನೆಯಲ್ಲಿ ಭರ್ತಿಮಾಡಿ ದಿನಾಂಕ 28.04.2022ರ ಒಳಗಾಗಿ ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

ನಮೂನೆ-1

| ಕ್ರ.ಸಂ | ಕಾಲೇಜಿನ ಹೆಸರು | ಹಂಚಿಕೆಯಾಗಿರುವ ಡಾಟಾ ಎಂಟ್ರಿ ಆಪರೇಟರ್ ಗಳ ಸಂಖ್ಯೆ | ಕರ್ತವ್ಯಕ್ಕೆ ವರದಿಮಾಡಿಕೊಂಡ ಡಾಟಾ ಎಂಟ್ರಿ ಆಪರೇಟರ್ ಗಳ ಸಂಖ್ಯೆ | ಕರ್ತವ್ಯಕ್ಕೆ ವರದಿಮಾಡಿಕೊಂಡ ಡಾಟಾ ಎಂಟ್ರಿ ಆಪರೇಟರ್ ಗಳ ಹೆಸರು | ಫೆಬ್ರವರಿ -2022ರವರೆಗೆ ಪಾವತಿಸಿರುವ ವೇತನದ ಒಟ್ಟು ಮೊತ್ತ |
|---|---|---|---|---|---|
| | | | | | |

ನಮೂನೆ-2

| ಕ್ರ.ಸಂ | ಕಾಲೇಜು/ಕಛೇರಿ ಹೆಸರು | ಹಂಚಿಕೆಯಾಗಿರುವ ಗ್ರೂಪ್ ಡಿ ಸಿಬ್ಬಂದಿಗಳ ಸಂಖ್ಯೆ | ಕರ್ತವ್ಯಕ್ಕೆ ವರದಿಮಾಡಿಕೊಂಡ ಗ್ರೂಪ್ ಡಿ ಸಿಬ್ಬಂದಿಗಳ ಸಂಖ್ಯೆ | ಕರ್ತವ್ಯಕ್ಕೆ ವರದಿಮಾಡಿಕೊಂಡ ಗ್ರೂಪ್ ಡಿ ಸಿಬ್ಬಂದಿಗಳ ಹೆಸರು | ಫೆಬ್ರವರಿ -2022ರವರೆಗೆ ಪಾವತಿಸಿರುವ ವೇತನದ ಒಟ್ಟು ಮೊತ್ತ |
|---|---|---|---|---|---|
| | | | | | |

R. Nagesha

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

ಸಂಬಂಧಪಟ್ಟ ಜಂಟಿ ನಿರ್ದೇಶಕರುಗಳು/ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು,

ಪ್ರತಿಯನ್ನು:

1. ಮೆ॥ ಜೆಮಿನಿ ಸೆಕ್ಯೂರಿಟಿ ಮತ್ತು ಅಲೈಡ್ ಸರ್ವಿಸಸ್, ನಂ.2345/19,5ನೇ ಅಡ್ಡ ರಸ್ತೆ,ಹೆಚ್.ಕೆ.ಆರ್ ಸರ್ಕಲ್, ದಾವಣಗೆರೆ-577004.-(ದಿನಾಂಕ:20.12.2021ರ ಇಲಾಖೆಯ ಕಾರ್ಯಾದೇಶದನ್ವಯ ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ತಮ್ಮ ಏಜನ್ಸಿ ಮುಖಾಂತರ ಒದಗಿಸಿರುವ ಹೊರಗುತ್ತಿಗೆ ನೌಕರರ ವಿವರಗಳು ಈ ಕಛೇರಿಗೆ ಕೂಡಲೇ ಒದಗಿಸುವುದು.)
2. ಮಾಹಿತಿ ಅಧಿಕಾರಿಗಳು, ಮಾಹಿತಿ & ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಸುತ್ತೋಲೆಯನ್ನು ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತಕ್ರಮಕ್ಕಾಗಿ.

Plan-06-2020-21-info to sections.docx